<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗುಬ್ಬಿ</u>

<u>ಸಿ.ಸಿ.ನಂ.4357/2022</u>

| | | | |
|---|---|---|---|
| ಹೆಸರು | : | ರವಿಕುಮಾರ್ | ಸಿ .ಡಬ್ಲ್ಯೂ :4 |
| ತಂದೆ ಹೆಸರು | : | ನರಸಿಂಗಯ್ಯ | ಪಿ .ಡಬ್ಲ್ಯೂ :3 |
| ವಯಸ್ಸು | : | 31 ವರ್ಷ | |
| ಉದ್ಯೋಗ | : | ವ್ಯವಸಾಯ | |
| ವಾಸಸ್ಥಳ | : | ಮೂಡಲಗಿರಿಯಯ್ಯನಪಾಳ್ಯ | |

ಸಾಕ್ಷಿಯನ್ನು ದಿಃ17-06-2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>

ಚಾಸಾ -1 ನನ್ನ ತಂದೆ , ಚಾಸಾ -2 ನನ್ನ ತಮ್ಮ .

ದಿ ಃ 01-09-2022 ರಂದು ಬೆಳಗ್ಗೆ 7.30 ರ ಸಮಯಕ್ಕೆ ನನ್ನ ತಮ್ಮನಿಗೆ ಗೋಪಾಲಪುರ ಕ್ರಾಸ್ ನ ಬಳಿ KSRTC ಬಸ್ ಮತ್ತು ದ್ವಿ ಚಕ್ರ ವಾಹನದ ನಡುವೆ ಅಪಘಾತವಾಗಿದೆ ಎಂದು ಆತನೊಡನೆ ಕೆಲಸಕ್ಕೆ ಹೋಗಿದ್ದ ಹುಡುಗರು ಕರೆ ಮಾಡಿದ್ದರು . ಬಸ್ಸಿನ ನೋಂದಣಿ ಸಂಖ್ಯೆಃ KA-06-F-0826 ಆಗಿತ್ತು . ದ್ವಿ ಚಕ್ರ ವಾಹನದ ನೋಂದಣಿ ಸಂಖ್ಯೆ ಗೊತ್ತಿಲ್ಲ . ಅಪಘಾತದ ನಂತರ ನನ್ನ ತಮ್ಮನನ್ನು ಗುಬ್ಬಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದರು . ಗುಬ್ಬಿ ಸರ್ಕಾರಿ ಆಸ್ಪತ್ರೆ ಯಲ್ಲಿ ಚಿಕಿತ್ಸೆ ಸಾಧ್ಯವಿಲ್ಲವೆಂದು ಹೇಳಿದ ಕಾರಣ ತುಮಕೂರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೆವು . ಅಲ್ಲಿಯು ಸಹಾ ಚಿಕಿತ್ಸೆ ಸಾಧ್ಯವಿಲ್ಲವೆಂದು ಹೇಳಿದ ಕಾರಣ ಬೆಂಗಳೂರಿನ ನಿಮಾನ್ಸ್ ಗೆ ಕರೆದುಕೊಂಡು ಹೋದೆವು . ಅಪಘಾತದಲ್ಲಿ ಚಾಸಾ -2 ರವರಿಗೆ ಕಾಲು ಕೈ ಮತ್ತು ತಲೆಗೆ ಹೆಚ್ಚಿನ ಪೆಟ್ಟುಗಳಾಗಿದ್ದವು . KSRTC ಬಸ್ಸು ಅತಿವೇಗವಾಗಿ ಬಂದ ಕಾರಣ ಈ ಅಪಘಾತ ನಡೆದಿದೆ ಎಂದು ಚಾಸಾ -2 ರವರು ನನಗೆ ತಿಳಿಸಿದ್ದರು . ಅಪಘಾತದ ಸಂಬಂಧ ಪೊಲೀಸರು ಮುಂದೆ ಹೇಳಿಕೆ ನೀಡಿದ್ದೇನೆ .

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಪ್ರಾಜ್ಞ ಸಹಾಯಕ ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದು, ಅದರಂತೆ ಅನುಮತಿ ನೀಡಲಾಯಿತು.

<u>ಪಾಟೀಸವಾಲುಃ ಸ ಸ ಅ ರವರಿಂದಃ</u>-

ನನ್ನ ತಮ್ಮ ಹೋಗುತ್ತಿದ್ದ ದ್ವಿ ಚಕ್ರ ವಾಹನದ ನೋಂದಣಿ ಸಂಖ್ಯೆ ಃ KA-06-S-4595 ಸ್ಪ್ಲೆಂಡರ್ ಪ್ಲಸ್ ದ್ವಿ ಚಕ್ರ ವಾಹನವಾಗಿತ್ತು ಎಂದರೆ ಸರಿ . ಅಪಘಾತದ ವಿಚಾರವನ್ನು

ನನ್ನ ತಂದೆ ನನಗೆ ತಿಳಿಸಿದ್ದಾರೆ ಎಂದರೆ ಸರಿಯಲ್ಲ.

<u>ಪಾಟೀಸವಾಲು: ಆರೋಪಿ ಪರ ವಕೀಲರಿಂದಃ</u>-

ನಾನು ಅಪಘಾತವನ್ನು ಕಣ್ಣಾರೆ ನೋಡಿಲ್ಲ ಎಂದರೆ ಸರಿ . ಮೇಲೆ ಹೇಳಿದ ನೋಂದಣಿ ಸಂಖ್ಯೆಯ KSRTC ಬಸ್ಸು ಈ ಅಪಘಾತದಲ್ಲಿ ಭಾಗಿಯಾಗಿಲ್ಲ . ನನ್ನ ತಮ್ಮನಿಗೆ ಅಪಘಾತದ ಪರಿಹಾರ ದೊರೆಯಲಿ ಎಂಬ ಕಾರಣಕ್ಕೆ ಸದರಿ ಬಸ್ಸಿನ ನೋಂದಣಿ ಸಂಖ್ಯೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ತಮ್ಮನೇ ದ್ವಿ ಚಕ್ರ ವಾಹನವನ್ನು ಚಲಾಯಿಸುವಾಗ ರಸ್ತೆಯ ಡುಬ್ಬದ ಮೇಲೆ ಅಜಾಗರೂಕತೆಯಿಂದ ವಾಹನ ಚಲಾಯಿಸಿ ಬಿದ್ದು ಅಪಘಾತ ಮಾಡಿಕೊಂಡಿದ್ದಾನೆ . ಅದಕ್ಕೆ ಪರಿಹಾರ ದೊರೆಯಲಿ ಎಂಬ ಕಾರಣಕ್ಕೆ ಈ ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ , ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿದೆ , ಸರಿ ಇದೆ ಎಂದು ಒಪ್ಪಿದ್ದಾರೆ.

Sd/-
(ಅನುಪಮ.ಡಿ )
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗುಬ್ಬಿ.